**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಫೌಜುದಾರಿ ಪ್ರಕರಣ ಸಂಖ್ಯೆ 569/2024**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲೀಸ್ ಉಪ-ನಿರೀಕ್ಷಕರು,
ಹೊನ್ನಾವರ ಪೋಲೀಸ್ ಠಾಣೆ.

-ವಿರುದ್ಧ-

ಆರೋಪಿಃ ಅರುಣ ತಂದೆ ಕೇಶವ ನಾಯ್ಕ
ವಯಸ್ಸುಃ 52 ವರ್ಷಗಳು,
ಉದ್ಯೋಗಃ ಕೂಲಿ ಕೆಲಸ,
ಸಾಕೀನಃ ಚಂದಾವರ ನಾಕಾ, ಚಂದಾವರ,
ತಾಲೂಕುಃ ಹೊನ್ನಾವರ.

**ದೋಷಾರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನೀವು ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನು ಹೊರಿಸುತ್ತಿದ್ದೇನೆ.

ದಿನಾಂಕಃ 12-08-2024 ರಂದು ಮಧ್ಯಾಹ್ನ 01-20 ಗಂಟೆ ಸಮಯದಲ್ಲಿ ಹೊನ್ನಾವರ ಪೋಲೀಸ್ ಠಾಣಾ ವ್ಯಾಪ್ತಿಯ ಹೊನ್ನಾವರ ತಾಲೂಕಿನ ಚಂದಾವರ ನಾಕಾದಲ್ಲಿ ಚಂದಾವರ ನಾಕಾದಿಂದ ಮಾರುತಿ ದೇವಸ್ಥಾನ ಕಡೆಗೆ ಹೋಗುವ ಸಾರ್ವಜನಿಕ ರಸ್ತೆಯಲ್ಲಿ ಇರುವ ಆರೋಪಿಯ ಸಹೋದರನಾದ ಚಾಸಾ-9 ಗಣಪತಿ ತಂದೆ ಕೇಶವ ನಾಯ್ಕರವರ ಹೆಸರಿನಲ್ಲಿರುವ ಮನೆ ನಂಬರ್ 371 ನೇದರ ಅಡುಗೆ ಮನೆಯಲ್ಲಿ ಸರ್ಕಾರದಿಂದ ಯಾವುದೇ ಅನುಮತಿ ಅಥವಾ ಪರವಾನಿಗೆಯನ್ನ ಪಡೆಯದೆ ಅನಧಿಕೃತವಾಗಿ ಕೆಂಪು ಬಣ್ಣದ ಎರಡು ಪ್ಲಾಸ್ಟಿಕ್ ಚೀಲದಲ್ಲಿ ಹೈವಾರ್ಡ್ಸ್ ಚಿಯರ್ಸ ವಿಸ್ಕಿ ಅಂತಾ ಬರೆದ ಖಾಕಿ ಬಣ್ಣದ ಒಂದು ರಟ್ಟಿನ ಬಾಕ್ಸ, ಒರಿಜಿನಲ್ ಚಾಯ್ಸ ಅಂತಾ ಬರೆದ ಖಾಕಿ ಬಣ್ಣದ ಒಂದು ರಟ್ಟಿನ ಬಾಕ್ಸಗಳಲ್ಲಿ ತಲಾ 500 ಮಿ.ಲೀ ಅಳತೆಯ ಯು.ಬಿ. ಎಕ್ಸಪೋರ್ಟ ಬಿಯರ್ ಹೆಸರಿನ 17 ಟಿನ್ ಗಳು ಇದ್ದು, ಒಂದು ಟಿನ್ ನ ಬೆಲೆ ರೂ.110 ಆಗಿದ್ದು, ಇವುಗಳ ಒಟ್ಟೂ ಮೌಲ್ಯ ರೂ.1,870/- ಆಗಿದ್ದು, ತಲಾ 180 ಮಿ.ಲೀ ಅಳತೆಯ ಬೆಂಗಳೂರು ವಿಸ್ಕಿ ಹೆಸರಿನ ಒಟ್ಟು 9 ಪೌಚ್‌ಗಳು ಇದ್ದು, ಒಂದು ಪೌಚಿನ ಬೆಲೆ ರೂ.63.07 ಆಗಿದ್ದು, ಇವುಗಳ ಒಟ್ಟೂ ಮೌಲ್ಯ ರೂ.567.63 ಆಗಿದ್ದು, ತಲಾ 90 ಮಿ.ಲೀ ಅಳತೆಯ ಒರಿಜಿನಲ್ ಚಾಯ್ಸ ಡಿಲಕ್ಸ ವಿಸ್ಕಿ ಹೆಸರಿನ 138 ಪೌಚ್‌ಗಳು ಇದ್ದು, ಒಂದು ಪೌಚ್‌ನ ಬೆಲೆ ರೂ.39.97 ಆಗಿದ್ದು, ಇವುಗಳ ಒಟ್ಟೂ ಮೌಲ್ಯ ರೂ.5515.86 ಆಗಿದ್ದು, ತಲಾ 90 ಮಿ.ಲೀ ಅಳತೆಯ ಹೈವರ್ಡ್ಸ್ ಚಿಯರ್ಸ ವಿಸ್ಕಿ ಹೆಸರಿನ ಒಟ್ಟೂ 84 ಪೌಚಗಳು ಇದ್ದು, ಒಂದು ಪೌಚ್‌ನ ಬೆಲೆ ರೂ.39.97 ಆಗಿದ್ದು, ಇವುಗಳ ಒಟ್ಟೂ ಮೌಲ್ಯ ರೂ.3357.48 ಆಗಿದ್ದು, ತಲಾ 180 ಮಿ.ಲೀ ಅಳತೆಯ ಓಲ್ಡ್ ಟಾವರಿನ ವಿಸ್ಕಿ ಹೆಸರಿನ ಒಟ್ಟೂ 20 ಪೌಚಗಳು ಇದ್ದು, ಒಂದು ಪೌಚ್‌ನ ಬೆಲೆ ರೂ.122.64 ಆಗಿದ್ದು, ಇವುಗಳ ಒಟ್ಟೂ ಮೌಲ್ಯ ರೂ.2452.8 ಆಗಿದ್ದು, ಒಟ್ಟೂ 33.700 ಲೀಟರ್ ಸಾರಾಯಿ ಪ್ರಮಾಣದ ಒಟ್ಟೂ 13763.77 ರೂಪಾಯಿ ಮೌಲ್ಯದ ಸಾರಾಯಿಯನ್ನು ಅಕ್ರಮವಾಗಿ ಮಾರಾಟ ಮಾಡಿ ಲಾಭಗಳಿಸುವ ಉದ್ದೇಶದಿಂದ ನಿಮ್ಮ ವಾಸದ

ಮನೆಯ ಅಡುಗೆ ಕೋಣೆಯಲ್ಲಿ ಇಟ್ಟುಕೊಂಡಿದ್ದು, ದಾಳಿಯ ಕಾಲಕ್ಕೆ ಸಿಕ್ಕಿ ಬಿದ್ದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಸಹಿ ಇದೆ.**

ದಿನಾಂಕಃ 14-11-2024.

ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಫೌಜುದಾರಿ ಪ್ರಕರಣ ಸಂಖ್ಯೆ 569/2024**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಹೊನ್ನಾವರ ಪೋಲಿಸ್ ಠಾಣೆ.

-ವಿರುದ್ಧ-

ಆರೋಪಿಃ ಅರುಣ ತಂದೆ ಕೇಶವ ನಾಯ್ಕ
ವಯಸ್ಸುಃ 52 ವರ್ಷಗಳು,
ಉದ್ಯೋಗಃ ಕೂಲಿ ಕೆಲಸ,
ಸಾಕೀನಃ ಚಂದಾವರ ನಾಕಾ, ಚಂದಾವರ,
ತಾಲೂಕುಃ ಹೊನ್ನಾವರ.

**ಆಪಾದನೆ**

ಪ್ರಶ್ನೆಃ ಈಗ ಓದಿ ಹೇಳಿದ ದೋಷರೋಪಣೆಗಳನ್ನು ನಿಮಗೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ಸದರಿ ದೋಷರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೊ?

ಉತ್ತರಃ

(ಸದರಿ ದೋಷಾರೋಪಣೆಗಳನ್ನು ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

**ಸಹಿ ಇದೆ.**

ದಿನಾಂಕಃ 14-11-2024.
ಸ್ಥಳಃಹೊನ್ನಾವರ.

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯದಂಡಾಧಿಕಾರಿಗಳು, ಹೊನ್ನಾವರ.**